ಡಾ॥ ಎ.ಎಸ್. ಆಚಾರ್ಯ:- O.K ಸರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಓಕೆ ಎಂದರೆ ಪ್ರೊಸಿಡಿಂಗ್ಸ್ ನಲ್ಲಿ ಹೋಗಬೇಕಲ್ಲಾ?

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ಅಧ್ಯಕ್ಷರೆ, ಈ ಬಗ್ಗೆ ನಾನು ಮಾತನಾಡಬೇಕಾಗಿದೆ ಅವಕಾಶ ಕೊಡಿ.

ಅಧ್ಯಕ್ಷರು :- ಈ ಗಮನ ಸೆಳೆಯುವ ಸೂಚನೆಯನ್ನು ಯಾರು ಕೇಳಿದ್ದಾರೆ, ಅವರು ಕೇಳಲಿ, ನೀವು ಸುಮ್ಮನೆ ಕುಳಿತುಕೊಳ್ಳಿ, ಎಲ್ಲದಕ್ಕೂ ಮಾತನಾಡಲು ಅವಕಾಶ ಕೊಡಿ ಎಂದು ನೀವು ಈ ರೀತಿ ನಿಂತುಕೊಂಡರೆ ಆಗುವುದಿಲ್ಲ. ಸದನದ ನಿಯಮವೇನಿದೆ ಎಂಬುದನ್ನು ತಿಳಿದುಕೊಳ್ಳಿ ಮೊದಲು. ಈ ರೀತಿ ನೀವು ಇಂಟರಪ್ಟ್ ಮಾಡಬಾರದು, ಎಲ್ಲದಕ್ಕೂ ಅವಕಾಶ ಕೊಡಲಾಗುವುದಿಲ್ಲ, ಎಲ್ಲಾ ವಿಷಯಕ್ಕೂ ನೀವೇ ಮಾತನಾಡಬೇಕೆಂದೇನು ಇಲ್ಲ, ಎಲ್ಲಾ ಸದಸ್ಯರು ಮಾತನಾಡಬೇಕಾಗುತ್ತದೆ, ಎಲ್ಲಾ ವಿಷಯಕ್ಕೂ ಪದೆ ಪದೆ ಎದ್ದು ನಿಂತುಕೊಳ್ಳುವುದು ಸರಿಯಲ್ಲ, ಮೊದಲು ಸದನದ ನಿಯಮವೇನಿದೆ ಎಂಬುದನ್ನು ತಿಳಿದುಕೊಳ್ಳಿ, ಹುಕ್ಕೇರಿಯವರೆ ನಿಮ್ಮ ಗಮನ ಸೆಳೆಯುವ ಸೂಚನೆಯನ್ನು ಕೇಳಿ.

(ಈ) ವಿಷಯ: ಚಿಕ್ಕೋಡಿ ಸದಲಗಾ ಕ್ಷೇತ್ರದಲ್ಲಿ ದೂಧ ಗಂಗಾ ನದಿಗೆ ಬ್ಯಾರೇಜನ್ನು ಕಟ್ಟಲಾಗಿದ್ದು, ಇದರಿಂದ ಸದಲಗ ಪಟ್ಟಣಕ್ಕೆ ಕುಡಿಯುವ ನೀರು ಪೂರೈಕೆಯಾಗುತ್ತಿದ್ದು ಕಳೆದ ಮಳೆಗಾಲದಲ್ಲಿ ದೂಧಗಂಗಾ ನದಿಗೆ ಮಹಾಪೂರದಿಂದ ಬ್ಯಾರೇಜ್ ಸಂಪೂರ್ಣ ಹಾಳಾಗಿದ್ದು, ನೀರನ್ನು ನಿಲ್ಲಿಸಲಿಕ್ಕಾಗುತ್ತಿಲ್ಲದಿರುವುದರಿಂದ ಕುಡಿಯುವ ನೀರಿನ ಪೂರೈಕೆಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಯೋಜನೆ ಮತ್ತು ಸಾಂಖ್ಯಿಕ ಸಚಿವರು) :-

ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಸದಲಗಾ ಹತ್ತಿರ ದೂಧಗಂಗಾ ನದಿಗೆ 1965-66 ನೇ ಸಾಲಿನಲ್ಲಿ 2.25 ಲಕ್ಷ ರೂ.ಗಳ ವೆಚ್ಚದೊಂದಿಗೆ ಬ್ರಿಡ್ಜ್ ಕಂ.

ಬ್ಯಾರೇಜ್ ನಿರ್ಮಾಣ ಮಾಡಲಾಗಿದೆ. ಈ ಬ್ಯಾರೇಜ್‌ನಿಂದ 607 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ವಿನ್ಯಾಸಿಸಲಾಗಿದೆ. ಈ ಬ್ಯಾರೇಜ್‌ನಿಂದ ಸದಲಗಾ, ಬೋರಗಾಂವ್, ಬೇಡ್ಕಿಹಾಳ, ಜನವಾಡ, ಶಮನೆವಾಡಿ, ಶಿರದವಾಡಿ, ಕಾರದಗಾ ಮತ್ತು ಭೋಜ ಗ್ರಾಮಗಳ ಜಮೀನುಗಳಿಗೆ ನೀರಾವರಿ ಸೌಲಭ್ಯ ಲಭ್ಯವಾಗುವುದಲ್ಲದೆ, ಬ್ಯಾರೇಜ್‌ನ ಹಿನ್ನೀರಿನಿಂದ ಸದಲಗಾ ಪಟ್ಟಣ ಹಾಗೂ ಸದರಿ ಗ್ರಾಮಗಳಿಗೆ ಕುಡಿಯುವ ನೀರನ್ನು ಸಹ ಒದಗಿಸಲಾಗುತ್ತಿದೆ.

ಈ ಬ್ಯಾರೇಜ್‌ನ್ನು ಕಲ್ಲುಕಟ್ಟಡಗಳಿಂದ ನಿರ್ಮಿಸಿದ್ದು, 28 ನಡುಗಂಭ (ಪಿಲ್ಲರ್ಸ್) ಗಳೊಂದಿಗೆ 29 ಕಿಂಡಿಗಳನ್ನು ಒಳಗೊಂಡಿದೆ. ಬ್ಯಾರೇಜಿನ ಉದ್ದ 91.5 ಮೀ, ಇದ್ದು, ಬ್ಯಾರೇಜಿನ ಮೇಲೆ 4.65 ಮೀ. ಅಗಲದ ಸ್ಲ್ಯಾಬ್ ರಸ್ತೆ ಇದೆ. ಕಿಂಡಿಗಳಿಗೆ ಮರದ ಹಲಿಗೆಗಳನ್ನು ಹಾಕಿ 4.00 ಮೀ ಎತ್ತರಕ್ಕೆ ನೀರನ್ನು ನಿಲ್ಲಿಸಲಾಗುತ್ತಿದೆ. 1998 ನೇ ಸಾಲಿನಲ್ಲಿ 600 ಮಿ.ಮೀ. ವ್ಯಾಸದ ಪೈಪುಗಳನ್ನು ಅಳವಡಿಸಿ ಬ್ಯಾರೇಜ್‌ನ್ನು 1.8 ಮೀ. ವರೆಗೆ ಎತ್ತರಿಸಲಾಗಿದೆ. ಬ್ಯಾರೇಜಿನಲ್ಲಿ 74 ಎಂ.ಸಿ. ಎಫ್.ಟಿ. ನೀರನ್ನು ಸಂಗ್ರಹಿಸಬಹುದಾಗಿದೆ.

ಪ್ರತಿವರ್ಷ ಜುಲೈನಿಂದ ಸೆಪ್ಟೆಂಬರ್‌ವರೆಗೆ ಈ ಬ್ಯಾರೇಜ್ ನದಿ ನೀರಿನಲ್ಲಿ ಮುಳುಗುತ್ತಿದ್ದು, ನೀರಿನ ಹರಿವು ಜನವರಿ ತಿಂಗಳವರೆಗೆ ಇರುತ್ತದೆ. ಮಹಾರಾಷ್ಟ್ರದ ಕಾಳಮ್ಮವಾಡಿ ಜಲಾಶಯದಿಂದ ವೇದಗಂಗಾ ಹಾಗೂ ದೂಧಗಂಗಾ ನದಿಗಳಿಗೆ ನೀರನ್ನು ಹರಿಯ ಬಿಡಲಾಗುತ್ತದೆ. ನವೆಂಬರ್ ತಿಂಗಳಿಂದ ಮೇ ತಿಂಗಳವರೆಗೆ ಹಲಗೆಗಳನ್ನು ಹಾಕಿ ಬ್ಯಾರೇಜ್ ನೀರನ್ನು ನಿಲ್ಲಿಸಲಾಗುತ್ತದೆ.

2007 ರ ಸಾಲಿನಲ್ಲಿ ಅತಿವೃಷ್ಟಿಯಿಂದ ಬ್ಯಾರೇಜ್‌ನ ನಡುಗಂಭವೊಂದು ಬಿದ್ದು ಹೋಗಿದ್ದು, ಇದನ್ನು ದುರುಸ್ತಿ ಮಾಡಲಾಗಿತ್ತು. ಆದಾಗ್ಯೂ ಈ ಬ್ಯಾರೇಜ್ ಶಿಥಿಲವೆಂದು ಘೋಷಿಸಿ ಜಿಲ್ಲಾಧಿಕಾರಿಗಳ ಆದೇಶದಂತೆ ವಾಹನಗಳ ಚಾಲನೆಯನ್ನು ನಿಷೇಧಿಸಲಾಗಿದೆ.

2008 ನೇ ಸಾಲಿನ ಜೂನ್ ತಿಂಗಳಲ್ಲಿ ಈ ಬ್ಯಾರೇಜ್‌ನ ಮೇಲೆ 1.5 ಮೀ ಪ್ರವಾಹವಿದ್ದ ಸಂದರ್ಭದಲ್ಲಿ ನಡುಗಂಭವೊಂದು ಬಿದ್ದಿದೆ. ಮತ್ತೊಂದಕ್ಕೆ ಹಾನಿಯಾಗಿದೆ. ಮತ್ತೆರಡರಲ್ಲಿ ಬಿರುಕು ಬಿಟ್ಟಿದೆ. ಇವುಗಳ ದುರುಸ್ತಿಗಾಗಿ 16.00 ಲಕ್ಷ ರೂ.ಗಳ ಅನುದಾನದ ಅಗತ್ಯವಿದೆ. ಪ್ರಕೃತಿ ವಿಕೋಪ ಶೀರ್ಷಿಕೆಯಡಿ ಅನುದಾನ ಲಭ್ಯವಾಗದೇ ಇದ್ದುದರಿಂದ ಈ ಕಾಮಗಾರಿಯನ್ನು ಕೈಗೊಳ್ಳಲಾಗಿಲ್ಲ.

ಬ್ಯಾರೇಜಿನ ದುರುಸ್ತಿಗೆ ಅನುದಾನವನ್ನು ಸದಲಗಾ ಪುರಸಭೆಯು ಮುಕ್ತ ನಿಧಿಯಿಂದ ಬಿಡುಗಡೆ ಮಾಡುವುದಾಗಿ ತಿಳಿಸಿರುವುದರಿಂದ ಅನುದಾನ ನಿರೀಕ್ಷಿಸ ಲಾಗುತ್ತಿದ್ದು, ಬಿಡುಗಡೆಯಾದ ತಕ್ಷಣ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು.

ಈ ಬ್ಯಾರೇಜ್‌ನಿಂದ ಗ್ರಾಮಗಳಿಗೆ ಕುಡಿಯುವ ನೀರಿನ ಅವಶ್ಯಕತೆಯನ್ನು ಗಮನಿಸಿ ಹಾಳಾದ ನಡುಗಂಭಗಳ ಹತ್ತಿರ ಪ್ರಸ್ತುತ ಉಸುಕಿನ ಚೀಲಗಳನ್ನು ಅಳವಡಿಸಿ 2.00 ಮೀ ಎತ್ತರಕ್ಕೆ ನೀರನ್ನು ನಿಲ್ಲಿಸಲಾಗಿದ್ದು, ಸದ್ಯ ಬ್ಯಾರೇಜಿನಲ್ಲಿ 15 ರಿಂದ 20 ಎಂ.ಸಿ.ಎಫ್.ಟಿ ನೀರಿನ ಸಂಗ್ರಹಣೆಯಿದೆ. ಮೇಲೆ ತಿಳಿಸಿದಂತೆ ದುರುಸ್ತಿಗೆ ಬೇಕಾದ ಅನುದಾನ ಲಭ್ಯವಾದ ತಕ್ಷಣ ದುರಸ್ತಿ ಕಾರ್ಯಕೈಗೊಂಡು ಹೆಚ್ಚಿನ ನೀರು ಸಂಗ್ರಹಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಪ್ರಕಾಶ್ ಬಿ ಹುಕ್ಕೇರಿ :- ಮಾನ್ಯ ಸಭಾಧ್ಯಕ್ಷರೆ, ಈ ಸದಲಗಾ ಬ್ಯಾರೇಜ್ ಶಿಥಿಲಗೊಂಡು 4 ವರ್ಷಗಳಾದವು. ಈ ಬ್ಯಾರೇಜ್ ಅನ್ನು ಸಂಪೂರ್ಣವಾಗಿ ದುರಸ್ಥಿ ಮಾಡಲಾಗುವುದಿಲ್ಲವೆಂದು, ನಾವು ಪ್ರಧಾನ ಮಂತ್ರಿಗಳ ಪ್ಯಾಕೇಜ್‌ನಲ್ಲಿ ಈ ಯೋಜನೆಯನ್ನು ಸೇರಿಸಿದ್ದೇವು. ಅದಕ್ಕೆ ನೀರಾವರಿ ಇಲಾಖೆಯಿಂದ ಎಷ್ಟಿಮೇಟ್ ಕೂಡ ಆಗಿತ್ತು. ಅದು ಮಂಜೂರಾಗುವ ಹಂತದಲ್ಲಿದ್ದಾಗ ಅ ಬ್ಯಾರೇಜ್ ಅನ್ನು ಏತಕ್ಕೆ ಬಿಟ್ಟರೆಂಬುದು ನನಗೆ ಗೊತ್ತಿಲ್ಲ. ಸಾಕಷ್ಟು ಪ್ರಯತ್ನ ಮಾಡಿ ಅ ಬ್ಯಾರೇಜ್ ಅನ್ನು ಸೀ ಲೆವೆಲ್‌ಗೆ ಎಷ್ಟಿಮೇಟ್ ಮಾಡಿಕೊಟ್ಟು ಇನ್ನೇನು ಬ್ಯಾರೇಜ್ ಪ್ರಧಾನ ಮಂತ್ರಿಗಳ ಪ್ಯಾಕೇಜ್ ನಲ್ಲಿ ಸೇರುತ್ತದೆ ಎಂದು ನಾವು ತಿಳುದುಕೊಂಡಿದ್ದೇವು, ಅದನ್ನು ಕೈಬಿಟ್ಟರು. ಅ ಬ್ಯಾರೇಜ್ ನಿಂದ ಸದಲಗಾ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆಯಾಗುತ್ತಿದೆ. ಸನ್ನೆವಾಡಿ ಮತ್ತು ಬೆಡಗಾವ್ ಗ್ರಾಮಗಳಿಗೂ ಕೂಡ ಈ ಜಾಕ್ವೆಲ್ ಮತ್ತು ಇಂಟೆಕ್ವೆಲ್ ಮುಖಾಂತರ ನೀರಿನ ಪೂರೈಕೆಯನ್ನು ಮಾಡುತ್ತಿದ್ದಾರೆ. ಸುಮಾರು 5-6 ನೈಜ ಗ್ರಾಮಗಳಿಗೂ ಕೂಡ ಸುಮಾರು 6 ಕಿ.ಮೀ ಅಂತರದೊಳಗೆ ನೈಜ ಗ್ರಾಮಗಳಿಗೆ ನೀರಿನ ವ್ಯವಸ್ಥೆಯಾಗುತ್ತಿದೆ. ಸುಮಾರು ಒಂದು ಒಂದೂವರೆ ಲಕ್ಷ ಜನ ಆ ಬ್ಯಾರೇಜಿನ ಕುಡಿಯುವ ನೀರನ್ನು ಅವಲಂಬಿಸಿದ್ದಾರೆ. 16 ಲಕ್ಷ ರೂಪಾಯಿಗಳು ಅತಿವೃಷ್ಟಿಯಲ್ಲಿ ಹಣವಿಲ್ಲವೆಂದರೆ ನಾವೇನು ಮಾಡಲಾಗುತ್ತದೆ. ನಮ್ಮ ಸರ್ಕಾರವಿದ್ದಾಗ 174 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಈ ಬ್ಯಾರೇಜ್‌ಗಾಗಿ ತಂದಿದ್ದೇವು. ಈಗ 16 ಲಕ್ಷ ರೂಪಾಯಿಗಳ ಬ್ಯಾರೇಜ್ ದುರಸ್ತಿಗೆ ಹಣ ಇಲ್ಲವೆಂದರೆ, ನಿಮ್ಮಿಂದ ನಾವೇನು ಉತ್ತರವನ್ನು ಅಪೇಕ್ಷೆ ಮಾಡಬೇಕೆಂದು ನಮಗೆ ತಿಳಿಯದಾಗಿದೆ. ಸನ್ಮಾನ್ಯ

ಮುಖ್ಯಮಂತ್ರಿಗಳು ಮೇಲಿಂದ ಮೇಲೆ ನಮ್ಮಲ್ಲಿ ಸಾಕಷ್ಟು ಹಣವಿದೆ, ನಮ್ಮಲ್ಲಿ ಹಣ ಸುರಿಯುತ್ತಿದೆ ಎಂದು ಹೇಳುತ್ತಾರೆ.

ಶ್ರೀ ಉಮೇಶ್ ಎ ಕತ್ತಿ [ತೋಟಗಾರಿಕೆ ಮತ್ತು ಬಂದಿಖಾನೆ ಸಚಿವರು]:- ಮಾನ್ಯ ಸಭಾಧ್ಯಕ್ಷರೆ, ಅವರು ಆಗ ಅವರು ಸದಲಗಾ ಕ್ಷೇತ್ರ ಶಾಸಕರಾಗಿದ್ದರು, ಕ್ಷೇತ್ರ ವಿಂಗಡಣೆಯ ಬಿಸಿಯಿಂದ ಅದನ್ನು ಮಾಡಲಾಗಲಿಲ್ಲ, ಅದನ್ನು ನಮ್ಮ ಸರ್ಕಾರ ಆದಷ್ಟು ಬೇಗ ಮಾಡಿಸುತ್ತದೆ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ :- ಸರ್, ಒಂದು ಕೆಲಸ ಮಾಡಿ, ಬೆಳಗಾಂ ಉಸ್ತುವಾರಿ ಸಚಿವರಾಗಿ ಬಸವರಾಜ ಬೊಮ್ಮಾಯಿ ಅವರಿದ್ದಾರೆ, ಸದಲಗಾ ಮತ್ತು ಚಿಕ್ಕೋಡಿ ಉಸ್ತುವಾರಿ ಸಚಿವರನ್ನಾಗಿ ದಯವಿಟ್ಟು ಉಮೇಶ್ ಕತ್ತಿಯವರನ್ನು ಮಾಡಿ, ನಮ್ಮ ಸದಲಗಾದ ಉಸ್ತುವಾರಿಯನ್ನು ಅವರೇ ನೋಡಿಕೊಳ್ಳಲಿ, ನಾನು ಅವರಿಗೆ ಸಂಪೂರ್ಣವಾಗಿ ಬೆಂಬಲವನ್ನು ಕೊಡುತ್ತೇವೆ,

ಅಧ್ಯಕ್ಷರೆ :- ಏಕೆಂದರೆ, ಅವರಿಗೆ ಬೆಳಗಾಂ ನಗರ ನೋಡಿಕೊಳ್ಳುವುದಕ್ಕೆ ಸಾಕಾಗಿದೆ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ :- ನಾನು ಯಾವುದೇ ಪ್ರಶ್ನೆಯನ್ನು ಕೇಳಿದರು ಅವರು [ಉಮೇಶ್ ಕತ್ತಿ] ಎದ್ದುನಿಲ್ಲುತ್ತಾರೆ, ನಾನೇನು ಮಾಡಲಿ, ಅದಕ್ಕೆ ಅವರಿಗೆ ಸದಲಗಾದ ಉಸ್ತುವಾರಿಯನ್ನು ಕೊಟ್ಟರೆ ಮುಂದಿನ ಸಾರಿ 5 ವರ್ಷವಾದ ಮೇಲೆ ನನ್ನನ್ನು ಗೆಲ್ಲಿಸಿಕೊಟ್ಟರೆ ಸಾಕು, ನನಗೆ ಯಾವುದೂ ಬೇಡ, ನಾವು ಯಾವುದನ್ನು ಕೇಳುವಂತಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಎಲ್ಲಾ ಜಿಲ್ಲೆಗಳ ಮಾಹಿತಿ ಇದೆ ಅರ್ಥವಾಗುತ್ತಿದೆ. ಬೆಳಗಾವಿ ಜಿಲ್ಲೆಯ ಪಾಲಿಟಿಕ್ಸ್ ಅರ್ಥವಾಗುತ್ತಿಲ್ಲ. ಆ ಕಡೆ ಉಮೇಶ್ ಕತ್ತಿ, ಈ ಕಡೆ ಪ್ರಕಾಶ್, ಆ ಕಡೆ ಗೋರೆ, ಈ ಕಡೆ ಗೋರೆ, ಈ ಕಡೆ ಬೊಮ್ಮಾಯಿನೂ ಕೈ ಹಾಕುತ್ತಿದ್ದಾರೆ. ಇದೆಲ್ಲಾ ನೋಡಿದರೆ ತಾವು ಬೆಳಗಾಂ ಬಗ್ಗೆ ಸ್ವಲ್ಪ ಹುಷಾರಾಗಿರಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ನನ್ನ ಕ್ಷೇತ್ರದ ಮೇಲೆ ಇದು ಸವಾರಿ ಆಗುತ್ತಿದೆ ನನಗೆ ಗೊತ್ತಿಲ್ಲ. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಅವರು ಏನೇನು ಹೆಸರು ಹೇಳಿದರು ಅವರ ಸವಾರಿ ಎಲ್ಲಾ ನನ್ನ ಕ್ಷೇತ್ರದ ಮೇಲೆ ಆಗುತ್ತಿದೆ. ಸನ್ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಇದ್ದಾರೆ, ಅದನ್ನು ಪ್ರಧಾನ

ಮಂತ್ರಿಗಳ ಪ್ಯಾಕೇಜ್‌ದಲ್ಲಿ ಸೇರಿಸಬೇಕು. ಇದನ್ನು ನೀವು SFC grant ನಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಕಾನೂನಿನ ತೊಡಕು ಇದೆ. ನಾವು ಪತ್ರ ಬರೆದು ಕೊಟ್ಟಿದ್ದೇವೆ.

ಅಧ್ಯಕ್ಷರು :- ನಿಲುವಳಿ ಸೂಚನೆ ಯಾವ ಸದಸ್ಯರು ಕೇಳುತ್ತಾರೆ ಅವರಿಗೆ ಅಷ್ಟೇ.

ಶ್ರೀ ಬಸವರಾಜ ಬೊಮ್ಮಾಯಿ:- ಬೆಳಗಾಂ ಜಿಲ್ಲೆಯ ಅಭಿವೃದ್ಧಿ ವಿಷಯದಲ್ಲಿ ಪಕ್ಷ ಭೇದ ಇಲ್ಲ. ಭಾಷೆ ಭೇದವೂ ಇಲ್ಲ ಎನ್ನುವುದಕ್ಕೆ ಪುರಾವೆ ಇಲ್ಲಿಯೇ ಇದೆ. ಉತ್ತರದಲ್ಲಿ ನಾವು ಪುರಸಭೆಯಿಂದ ಅನುದಾನ ನಿರೀಕ್ಷೆ ಮಾಡಿದ್ದೇವೆ ಎಂದು ಇದ್ದರೂ ಕೂಡ ಮಾನ್ಯ ಪ್ರಕಾಶ್ ಹುಕ್ಕೇರಿಯವರು ಈ ವಿಷಯವನ್ನು ನಮ್ಮ ಗಮನ ಸೆಳೆದ ಮೇಲೆ ನಾವು ಅದಕ್ಕೆ ಕಾಯುವುದಿಲ್ಲ. ಮೈನರ್ ಇರಿಗೇಷನ್‌ನಲ್ಲಿ ಆ ಹಣವನ್ನು ಒದಗಿಸಿ ಆದಷ್ಟು ಬೇಗ ಕಾಮಗಾರಿಯನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಮಾನ್ಯ ಅಧ್ಯಕ್ಷರೆ, ಯಾವ ವೇಳೆಯಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಬೊಮ್ಮಾಯಿಯವರನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡಿದರು ಆಗಲೇ ನಮಗೆ ಬಹಳ ಸಂತೋಷವಾಯಿತು. ಹಾಗಾಗಿ ನೀವು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾಗಿ ನಾಲ್ಕುವರೆ ವರ್ಷ ಇರಲಿ ಎಂದು ನಾವು ನಿಮ್ಮನ್ನು ಬೇಡಿಕೊಳ್ಳುತ್ತೇವೆ.

ಡಾ॥ ವಿ.ಎಸ್. ಆಚಾರ್ಯ: (ಗೃಹ ಸಚಿವರು) :- ಸಿರಾ ಘಟನೆ ಬಗ್ಗೆ ಮಾನ್ಯ ಪ್ರತಿಪಕ್ಷದ ಶಾಸಕರು ನನ್ನ ಗಮನ ಸೆಳೆದಿದ್ದರು. ಪ್ರಾರಂಭಿಕ ಮಾಹಿತಿ ಬಂದಿದೆ. ಸಿರಾ ದಲ್ಲಿ ಸದುದ್ದೇಶದಿಂದಲೇ ಹೊರಟಂತಹ ಒಂದು ಮೆರವಣಿಗೆ ಶಾಂತ ರೀತಿಯಿಂದ ಹೋಗುತ್ತಿರುವಾಗ ಅದರ ಗುರುತಾದ ದಾರಿಯಿಂದ ಬದಲಾವಣೆ ಆಗಬಹುದು ಎಂದು ಹೇಳುವಂತಹ ಸಂದರ್ಭದಲ್ಲಿ ಪೋಲಿಸರು ಅಲ್ಲಿ ಮಧ್ಯಪ್ರವೇಶ ಮಾಡಿದ್ದಾರೆ. ಅವರು ಮೊದಲು ಕೊಟ್ಟ ದಾರಿಯಲ್ಲಿಯೇ ಹೋಗಬೇಕೆಂದು ಹೊರಟಿದ್ದರು. ಅಷ್ಟರಲ್ಲಿ ಆ ಮೆರವಣಿಗೆ ಮೇಲೆ ಒಂದು ಕಲ್ಲು ಬಿದ್ದಿತು ಎಂದು ತಿಳಿಯಿತು. ಗುಂಪನ್ನು ಚದುರಿಸಲಿಕ್ಕೆ ಪೋಲಿಸರು ಸ್ವಲ್ಪ ಲಘು ಲಾಠಿ ಪ್ರಹಾರ ಮಾಡಿದ್ದಾರೆ. ಅದಕ್ಕಿಂತ ಹೆಚ್ಚಿಗೆ ಏನೂ ಮಾಡಲಿಲ್ಲ. ಈ ಒಂದು ಗಲಭೆಯಲ್ಲಿ ನಾಲ್ಕು ಜನರಿಗೆ ಸ್ವಲ್ಪ out patient ಆಗಿ ಚಿಕಿತ್ಸೆ ಕೊಡುವ ರೀತಿಯಲ್ಲಿ ಚಿಕಿತ್ಸೆ ಕೊಡಬೇಕಾಯಿತು. ಇದೇ ಮೆರವಣಿಗೆಯವರಿಗೆ ಸಂಬಂಧಪಟ್ಟ ಒಬ್ಬ